

# ಅಂಗಳ ತುಂಬಿದ ಡೇರೆಗಳ ಚಿತ್ತಾರ

**ಮನೆಯಂಗಳದ ತುಂಬಾ ಅರಳಿ ನಿಂತ ಬಣ್ಣಬಣ್ಣದ ಡೇರೆ ಹೂಗಳನ್ನು ನೋಡುವುದೇ ಚೆಂದ. ಸುಮಾರು 75 ಬಗೆಯ ಡೇರೆ ಹೂಗಳು ವನಿತಾ ಅವರ ತೋಟದಲ್ಲಿವೆ.**

■ **ಆಶಾ ಕೆರೆಗದ್ದೆ**





ಮನೆಯಂಗಳ ಸುಂದರವಾಗಿ ಕಾಣಲೆಂದು ತೋಟದಲ್ಲಿ ಒಂದಷ್ಟು ಬಣ್ಣಬಣ್ಣದ ಡೇರೆಗಳನ್ನು ಬೆಳೆಸುವುದು ಸಹಜ. ಆದರೆ ಶಿರಸಿಯ ಕಲ್ಗಾರಒಡ್ಡಿನಲ್ಲಿನ ಈ ಮನೆಯಂಗಳದ ತುಂಬೆಲ್ಲಾ ಡೇರೆ ಹೂಗಳದ್ದೇ ಕಾರುಬಾರು. ಬರೋಬ್ಬರಿ 500ಕ್ಕೂ ಹೆಚ್ಚು ಡೇರೆ ಹೂ ಗಿಡಗಳು ತಮ್ಮ ಸೌಂದರ್ಯದಿಂದ ಆಕರ್ಷಿಸುತ್ತಾ ನಿಂತ ಪರಿ ನೋಡಲೇ ಬಲು ಸೊಗಸು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಕಲ್ಗಾರಒಡ್ಡಿನ ವನಿತಾ ರಾಜೇಂದ್ರ ಭಟ್ಟ ಅವರ ಕೈಚಳಕದಿಂದ ಈ ಹೂಗಳ ಸುಂದರ ತೋಟ ಸೃಷ್ಟಿಯಾಗಿದೆ.

30 ವರ್ಷಗಳ ಹಿಂದೆ ಡೇರೆ ಗಿಡಗಳನ್ನು ಖುಷಿಗಾಗಿ ಬೆಳೆಸಲು ಆರಂಭಿಸಿದ ವನಿತಾ ಅವರು, ಆರಂಭದಲ್ಲಿ ಐದಾರು ಗಿಡಗಳನ್ನು ಬೆಳೆಸಿದ್ದರು. ಆನಂತರ ಎಲ್ಲೇ ಹೋದರೂ ಕಣ್ಣಿಗೆ ಬೀಳುತ್ತಿದ್ದ ಹೊಸ ಬಗೆಯ ಡೇರೆ ಹಿಳ್ಳುಗಳನ್ನು ತಂದು ಬೆಳೆಸುತ್ತಿದ್ದರು. ಹೀಗೆ ವರ್ಷದಿಂದ ವರ್ಷಕ್ಕೆ ಗಿಡಗಳ ಸಂಖ್ಯೆ ಹೆಚ್ಚುತ್ತಾ ಸಾಗಿ ಇದೀಗ 500ಕ್ಕೂ ಹೆಚ್ಚು ಹೂ ಗಿಡಗಳು ಅಂಗಳದಲ್ಲಿ ಅರಳಿ ನಿಂತಿವೆ.

ಸುಮಾರು 75 ಬಗೆಯ ಡೇರೆ ಹೂವುಗಳು ಇವರ ತೋಟದಲ್ಲಿದ್ದು, ಒಂದಕ್ಕಿಂತ ಒಂದು ನೋಡಲು ಆಕರ್ಷಕವಾಗಿವೆ. ಲಿಲ್ಲಿಪುಟ್, ಬೇಸಿಗೆ ಕಮಲ, ಕೆರೆತಾವರೆ, ಹಳದಿ ಡೇರೆ, ಹಳದಿ ಕಡ್ಡಿ, ಯಜ್ಞಕುಂಡ, ಗಿಡ್ಡ ಕಮಲಿ, ಹಳದಿ ಕಡ್ಡಿ, ಬಿಳಿ ಕಡ್ಡಿ, ಕೆಂಪುಕಡ್ಡಿ, ಗಂಧದ ಕಡ್ಡಿ, ನೇರಳೆ ಕಡ್ಡಿ, ಗೆಂಟಿಕೆ ಕಡ್ಡಿ, ದೊಡ್ಡ ಬಿಳಿ, ಸಾದಾ ಬಿಳಿ ಹೀಗೆ ಹಲವಾರು ವೈವಿಧ್ಯದ ಡೇರೆ ಹೂಗಳ ಸಂಗ್ರಹವೂ ಇಲ್ಲಿದೆ. ತಮ್ಮ ಬಿಡುವಿನ ಸಮಯವನ್ನೆಲ್ಲಾ ಅಂದ ಚೆಂದದ ಡೇರೆ ಗಿಡ ಬೆಳೆಸಲೆಂದೇ ಮೀಸಲಿಟ್ಟಿದ್ದಾರೆ ವನಿತಾ.

ವರ್ಷವಿಡೀ ಈ ಹೂಗಳ ಪೋಷಣೆಯನ್ನು ಪ್ರೀತಿಯಿಂದ ನಿರ್ವಹಿಸುತ್ತಾರೆ ಅವರು. ಬೆಳೆದ ಡೇರೆ ಗಿಡಗಳ ಗೆಡ್ಡೆಗಳನ್ನು ಬೇಸಿಗೆಯಲ್ಲಿ ನೆರಳಲ್ಲಿ ಇಟ್ಟು ನೀರುಣಿಸಿ ಪೋಷಿಸುತ್ತಾರೆ. ಮಣ್ಣು, ಗೊಬ್ಬರ ಹಾಕಿದ ಚೀಲದಲ್ಲಿ ಹಿಳ್ಳುಗಳನ್ನು ಬೆಳೆಸಿ ಮಳೆಗಾಲ ಆರಂಭವಾಗುತ್ತಿದ್ದಂತೆ ಅಂಗಳದಲ್ಲಿ ಇಡುತ್ತಾರೆ. ಮಳೆಗಾಲದಲ್ಲಿ ಚೀಲದಲ್ಲಿ ತುಂಬಿದ ಗಿಡಗಳಿಗೆ ಜವಳಾಗಬಾರದೆಂದು ಚೀಲಗಳ ಅಡಿಯಲ್ಲಿ ಅಡಿಕೆ ದಬ್ಬೆಯ ಅಟ್ಟಲು ಮಾಡುತ್ತಾರೆ. ಗಿಡಗಳ ಚೀಲದಲ್ಲಿ ಹೊಸ ಮಣ್ಣು, ಗೊಬ್ಬರದ ಜೊತೆಗೆ ದರಕು, ಸಿಪ್ಪೆಯನ್ನು ಮುಚ್ಚುತ್ತಾರೆ.

ಹೀಗೆ ಬೆಳೆದ ಗಿಡಗಳು ಆಗಸ್ಟ್ ಹೊತ್ತಿಗೆ ಹೂವು ಬಿಡುತ್ತವೆ. ಕೆಲವು ತಿಂಗಳು ಅರಳಿ ನಿಂತು ನೋಡುವವರಿಗೆಲ್ಲಾ ಖುಷಿ ಹಂಚುತ್ತವೆ. ವನಿತಾ ಅವರ ಅಂಗಳದ ಈ ಹೂಲೋಕವನ್ನು ಕಣ್ತುಂಬಿಕೊಳ್ಳಲು ಸಾಕಷ್ಟು ಜನರು ಬರುತ್ತಾರೆ. ಇವರಿಂದ ಪ್ರೇರಣೆಯಾಗಿ ಅವರೂ ಗಿಡ ಬೆಳೆಸುವ ಆಸಕ್ತಿ ತೋರಿದರೆ, ಒಂದಷ್ಟು ಗಿಡಗಳ ಹಿಳ್ಳುಗಳನ್ನು ಪೂರೈಸುತ್ತಾರೆ.

'ಹೂವಿನ ಗಿಡಗಳನ್ನು ಬೆಳೆಸಲು ಆಸಕ್ತಿ ತುಂಬಾ ಮುಖ್ಯ. ಅದರಲ್ಲಿ ಶ್ರದ್ಧೆ, ಖುಷಿಯಿಂದ ತೊಡಗಿದಾಗ ಅವು ಸುಂದರವಾಗಿ ಬೆಳೆಯುತ್ತವೆ. ಪ್ರೀತಿಯಿಂದ ಅವುಗಳ ಆರೈಕೆ ಮಾಡಿದರೆ ನಮ್ಮ ಮನಸ್ಸಿಗೂ ಸಂತೋಷ ಕೊಡುತ್ತವೆ' ಎಂದು ತಮ್ಮ ಡೇರೆ ಕೃಷಿ ಬಗ್ಗೆ ಸಂತಸದ ಮಾತುಗಳನ್ನಾಡುತ್ತಾರೆ ವನಿತಾ. ■